**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅರುಣ ಶಹಾಪುರ ರವರ ನಿಯಮ 72ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

ವಿಷಯ :

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಮೀನಗಡ ಎಲ್.ಟಿ, ಹುನುಗುಂದ ತಾಲ್ಲೂಕು ಬಾಗಲಕೋಟೆ ಜಿಲ್ಲೆ ಈ ಶಾಲೆಯು 40-50 ವರ್ಷಗಳಿಂದ ವಿವಿಧ ಬಾಡಿಗೆ ಹಾಗೂ ಸರ್ಕಾರಿ ಸ್ವಾಮ್ಯದ ಹಲವಾರು ಚಿಕ್ಕ ಕಟ್ಟಡಗಳಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಪ್ರಸ್ತುತ ಈ ಶಾಲೆಯು 12*20 ಅಳತೆಯ ಚಿಕ್ಕ ಕಟ್ಟಡದಲ್ಲಿ ನಡೆಯುತ್ತಿದ್ದು 1 ರಿಂದ 7ನೇ ತರಗತಿಗಳನ್ನು ನಡೆಸಬೇಕಾಗಿರುವುದರಿಂದ ಸ್ಥಳದ ಕೊರತೆ ಇರುತ್ತದೆ. ಕಾರಣ ಈ ಶಾಲೆಗೆ ಹೊಸ ಕಟ್ಟಡ ನಿರ್ಮಾಣಕ್ಕಾಗಿ ಹಾಗೂ ಮೂಲಭೂತ ಸೌಕರ್ಯಗಳಿಗಾಗಿ ಅಗತ್ಯ ಅನುದಾನವನ್ನು ಬಿಡುಗಡೆ ಮಾಡಿ ಈ ಶಾಲೆಗೆ ಕಾಯಕಲ್ಪ ಒದಗಿಸುವ ನಿಟ್ಟಿನಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಉತ್ತರ:

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಮೀನಗಡ ಎಲ್.ಟಿ, ಹುನುಗುಂದ ತಾಲ್ಲೂಕು ಬಾಗಲಕೋಟೆ ಜಿಲ್ಲೆ ಈ ಶಾಲೆಯಲ್ಲಿ 1 ರಿಂದ 7ನೇ ತರಗತಿಯವರೆಗೆ ತರಗತಿಗಳು ನಡೆಯುತ್ತಿದ್ದು, ಈ ಶಾಲೆಯಲ್ಲಿ ಒಟ್ಟು 4 ಸುಸಜ್ಜಿತ ಕೊಠಡಿಗಳಿರುತ್ತವೆ. ಕುಡಿಯುವ ನೀರಿನ ಸೌಲಭ್ಯ, ವಿದ್ಯುತ್ ಸೌಲಭ್ಯ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

ಮಕ್ಕಳ ದಾಖಲಾತಿ ಕೆಳಕಂಡಂತಿದೆ:

| ತರಗತಿ | 1 | 2 | 3 | 4 | 5 | 6 | 7 | ಒಟ್ಟು |
|---|---|---|---|---|---|---|---|---|
| ದಾಖಲಾತಿ | 6 | 8 | 8 | 10 | 8 | 16 | 11 | 67 |
| ಹಾಜರಾತಿ | 6 | 6 | 6 | 7 | 6 | 12 | 8 | 51 |

ಪ್ರಸ್ತುತ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳಿರುತ್ತವೆ. ಸದರಿ ಶಾಲೆಗೆ ವಿಶಾಲವಾದ ಆಟದ ಮೈದಾನ ಅವಶ್ಯಕತೆ ಇದ್ದು, ಆಟದ ಮೈದಾನ ಒದಗಿಸಲು ಅಗತ್ಯಕ್ರಮ ವಹಿಸಲಾಗುತ್ತದೆ.

**ಸಂಖ್ಯೆ : ಇಪಿ 132 ಯೋಸಕ 2022**

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು